A.C. No.01/2023

ಪಿ.ಡಬ್ಲ್ಯೂ1

ದಿನಾಂಕಃ 01-03-2025.

ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ R.N.D. ರವರಿಂದ ಃ**

ಅರ್ಜಿದಾರ ಶೇಷಾರೆಡ್ಡಿ ಇವರು ಒಂದು ಅಸಲು ದಾವಾ ನಂಬರ 54/1987 ನ್ನು ಯಾದಗಿರಿ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಶೇಷಾರೆಡ್ಡಿ ಇವರ ಸಹಿಯನ್ನು ನಾನು ಗುರುತಿಸಬಲ್ಲೆ. ಅಸಲು ದಾವಾ ನಂಬರ 54/1987 ರ ವಾದ ಪತ್ರದ ಮೇಲಿನ ಸಹಿಯನ್ನು ಸಾಕ್ಷಿ ನೋಡಿ ಅದು ಶೇಷಾರೆಡ್ಡಿ ಇವರ ಸಹಿ ಇರುತ್ತದೆ ಎಂದು ಗುರುತಿಸಿರುತ್ತಾರೆ. ಸದರಿ ಶೇಷಾರೆಡ್ಡಿ ಇವರ ಸಹಿ ಇರುವ ದಾಖಲೆ ನನಗೆ ಓದಲು ಸಾಧ್ಯವಾಗುವುದಿಲ್ಲ. ನಾನು 6 ನೇ ತರಗತಿಯವರೆಗೆ ತೆಲುಗು ಮಾಧ್ಯಮದಲ್ಲಿ ಓದಿರುತ್ತೇನೆ. ನಾನು ಅಂಕಿಗಳನ್ನು ಗುರುತಿಸುತ್ತೇನೆ. ಸದರಿ ಶೇಷಾರೆಡ್ಡಿ ಇವರ ಸಹಿ ಇರುವ ದಾಖಲೆ ಮೇಲೆ ಅಸಲು ದಾವಾ ನಂಬರ 54/1987 ಎಂದು ಬರೆಯಲಾಗಿದೆ ಎಂದರೆ ಸರಿ.

ಸದರಿ ಅಸಲು ದಾವಾ ನಂಬರ 54/1987 ರ ವಾದ ಪತ್ರ, ಆದೇಶ ಪುಟದ ದೃಢೀಕೃತ ಪ್ರತಿಗಳನ್ನು ನಿಶಾನೆಗೊಳಿಸಲು ತಕರಾರು ಇರುವುದಿಲ್ಲ ಎಂದು ಅರ್ಜಿದಾರ ಪರ ವಕೀಲರು ಅವುಗಳನ್ನು ನಿಡಿ. 1 ರಿಂದ 4 ಎಂದು ಗುರುತಿಸಲಾಯಿತು. ವಾದ ಪತ್ರದ Verifying affidavit ಮೇಲೆ ಇರುವ ಶೇಷಾರೆಡ್ಡಿ ಇವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಾನು ಈ ಅರ್ಜಿಯನ್ನು ಶೇಷಾರೆಡ್ಡಿ ಪರವಾಗಿ

This is a True Copy of the Court Records Online. Authenticated @ districts.ecourtsindia.com/cnr/KAYG210006802023/truecopy/order-4.pdf

ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಹ ಮುಂದುವರೆದು ಶೇಷಾರೆಡ್ಡಿ ಇವರು ನನಗೆ GPA ಪತ್ರ ಬರೆದುಕೊಟ್ಟಿದ್ದು ಅದರ ಆಧಾರದ ಮೇಲೆ ಈ ಅರ್ಜಿ ಸಲ್ಲಿಸಿರುವುದಾಗಿ ಹೇಳುತ್ತಾರೆ. ಅಸಲು ದಾವಾ ನಂಬರ 54/1987 ಅದರ Corresponding Number 117/1989 ರ ಲ್ಲಿ ಪಾಸು ಮಾಡಿರುವ ಆದೇಶವನ್ನುಇಲ್ಲಿವರೆಗೆ ನಾನಾಗಾಲಿ ಅಥವಾ ಶೇಷಾರೆಡ್ಡಿಯರಾಗಲಿ ಮಾನ್ಯ ಮೇಲ್ಮನವಿ ನ್ಯಾಯಾಲಗಳಲ್ಲಿ ಪ್ರಶ್ನಿಸಿರುವುದಿಲ್ಲ. ಸಾಕ್ಷಿ ಸ್ವತಹ ಮುಂದುವರೆದು ನಾವು Arbitration ಅರ್ಜಿ ಸಲ್ಲಿರುತ್ತೇವೆ ಎಂದು ಹೇಳುತ್ತಾರೆ. ಅಸಲು ದಾವೆ ನಂಬರ 54/1987 ಅದರ Corresponding Number 117/1989 ಮತ್ತು ಪ್ರಸಕ್ತ ಅರ್ಜಿ ಒಂದೆ ಸ್ವರೂದ್ದಾಗಿರುತ್ತವೆ ಎಂದರೆ ಸರಿಯಲ್ಲ. ಸದರಿ ಅಸಲು ದಾವ ನಂಬರ 54/1987 ಅದರ Corresponding Number 117/1989 ವಜಾಗೊಂಡ ನಂತರ ಈ ಅರ್ಜಿ ಸಲ್ಲಿಸಲು ನನಗೆ ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ನಾನು 1987 ರಿಂದ 1989 ರವರೆಗೆ ನಾನು ಸದರಿ ಶೇಷಾರೆಡ್ಡಿ ಇವರನ್ನು ಆವಾಗ ಆವಾಗ ಭೇಟಿಯಾಗಿರುತ್ತೇನೆ. ನಾವು ಹಾಗೆ ಭೇಟಿ ಆದಾಗ ಶೇಷಾರೆಡ್ಡಿ ಇವರು ಅಸಲು ದಾವೆ ನಂಬರ 54/1987 ಅಥವಾ 117/1989 ರ ಬಗ್ಗೆ ನನ್ನ ಜೊತೆ ಚರ್ಚೆ ಮಾಡಿರಲಿಲ್ಲ. ಅಸಲು ದಾವಾ ನಂಬರ 54/1987 ಅದರ Corresponding Number 117/1989 ರ ಬಗೆ ನನಗೆ ಈ ಪ್ರಕರಣದಲ್ಲಿ ಪಾಟಿ ಸವಾಲು ಮಾಡಲು ಪ್ರಾರಂಭಿಸಿದಾಗ ನನಗೆ ಗೊತ್ತಾಗಿರುತ್ತದೆ. ಅಸಲು ದಾವಾ ನಂಬರ 54/1987 ಅದರ Corresponding Number 117/1989 ರ ಬಗ್ಗೆ ನನಗೆ ಈ ಪ್ರಕರಣದಲ್ಲಿ ಪಾಟಿ ಸವಾಲು ಮಾಡಲು ಪ್ರಾರಂಭಿಸಿದಾಗ

This is a True Copy of the Court Records Online. Authenticated @ districts.ecourtsindia.com/cnr/KAYG210006802023/truecopy/order-4.pdf

www.ecourtsindia.com

ನನಗೆ ಗೊತ್ತಾಗಿರುತ್ತದೆ ಎಂದು ಹೇಳಿ ಸುಳ್ಳ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಹಿಂದೆಯೂ ಸಹ ನನಗೆ ಶೇಷಾರೆಡ್ಡಿ ಇವರು ಆ ಬಗಗೆ ಹೇಳಿದ್ದರು ಎಂದರೆ ಸರಿಯಲ್ಲ. ನಾನು ಪ್ರತಿದಿಯರ ವಿರುದ್ದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾದಂ. ಶಹಾಪೂರ.

This is a True Copy of the Court Records Online. Authenticated @ districts.ecourtsindia.com/cnr/KAYG210006802023/truecopy/order-4.pdf